" ಮೇಲೆಕಂಡ ಸಿ. ಡಿ. ಯಂಬ ನಾನು, ಸದರೀ ತಖ್ತೀಯಲ್ಲಿ ಕಂಡ ಜಮೀನ್ಗಳ ರೆವಿನ್ಯು ರಿಜಿಸ್ಟ್ರಿಯು ನನ್ನ ಹೆಸರಿಗೆ ವರ್ಗ ಮಾಡಲ್ಪಡುವ ಬಗ್ಗೆ ಒಪ್ಪಿ ಯಿರುತ್ತೇನೆ.

ರುಜು ಸಿ. ಡಿ.

ತಖ್ತೆ.

ತಾಲ್ಲೂಕು.	ಜೋಡಿ.	ಗ್ರಾಮ.	ಸರ್ವೇ ನಂಬರ್.	ಖಾತೆ ನಂಬರ್.	ಖಾಯಂ ಅಥವಾ ಅಡವಿನ ಜಮೀನು.	ಬೀಜದವರೀ.	ಆಕಾರ.
1	2	3	4	5	6	7	8

ನನ್ನ ರೂಬರೂ ಬರೆಯಲ್ಪಟ್ಟಿತು.

ರುಜು.

ರೆಜಿಸ್ಟ್ರರ್ ಅಥವಾ ಸಬ್ ರೆಜಿಸ್ಟ್ರಾರ್
(ಸಂದರ್ಭಾನುಸಾರ.)

ಮೊಕ್ಕಾಂ
ತಾರೀಖು.

(2) ಸರ್ವೇ ನಂಬರು ಯಿಲ್ಲದಂಥಾ ಜಮೀನ್ಗಳ ವಿಷಯದಲ್ಲಿಯೂ ಹಾಂಗೂ ಇನಾಂ ಗ್ರಾಮಗಳು ಮುಂತಾದ ವಿಷಯದಲ್ಲಿಯೂ ಜಮೀನು ರಿಜಿಸ್ಟ್ರಿ ಮಾಡಲ್ಪಟ್ಟ ದಸ್ತಾವೇಜಿನ ಪ್ರಕಾರ ಚಕ್ಕು ಬಂದಿ ಮೂಲಕ ವಿವರಿಸಲ್ಪಡತಕ್ಕದ್ದು; ಮತ್ತು ತಖ್ತೀಯಲ್ಲಿ ಕಂಡ ತಮಾಂ ತಪಶೀಲ್ಗಳನ್ನೂ ವದಗಿಸುವದಕ್ಕೆ ಕಕ್ಷಿಗಾರರು ಅಸಮರ್ಥರಾಗಿರುವ ಸಬಬಿನ ಮೇಲೆ ಸದರೀ ಅರ್ಜಿಯನ್ನು ಬರಸದೆ ಯಿರಕೂಡದು, ಪರಂತು ಜಮೀನುಗಳು ಫಲಾನೇವೆಂದು ಗೊತ್ತು ಮಾಡಲ್ಪಡುವ ಬಗ್ಗೆ ಸಾಕಾದ ಸಂಗತಿಗಳು ನಮೂದ್ ಮಾಡಿದರೆ ಸಾಕಾಗಿರುತ್ತೆ.

(3) ದಾಖಲೆ ಬಗ್ಯಾಗಿ, ರಿಜಿಸ್ಟ್ರಿಂಗ್ ಆಫೀಸರರು, ಪ್ರತಿ ಅರ್ಜಿಯು ಮೇಲೂ ಅದರಲ್ಲಿ ನಮೂದ್ ಮಾಡೋಣಾದ ದಸ್ತಾವೇಜು ರಿಜಿಸ್ಟ್ರಿ ಮಾಡಲ್ಪಟ್ಟ ರಿಜಿಸ್ಟರ್ ಬುಕ್ಕಿನ ಸಂಪುಟ ಮತ್ತು ಪುಟಗಳ ಸಂಖ್ಯೆಯನ್ನು ನೆಮೂದಿಸತಕ್ಕದ್ದು.

ತಾರೀಖು 2ನೇ ಜುಲೈ 1887.

ನಂ. 47.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಅದಲಬದೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೊಸ್ಕರ ಕ್ರಮ ಪ್ರಕಾರ ಜಪ್ತಿಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ನಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷ್ನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ, ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಜೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರೆಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವಶ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷ್ನರವರಿಂದ ರುಜು ವೊಹರ್ ಮಾಡೊಡಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಜಿಲ್ಲೆ. ತಾಲ್ಲೂಕು. ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ಯೆಟೆರೆಂಟ್.	ಯಾವಬುಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ಚಿಕ್ಕನಾಯಕನಹಳ್ಳಿ. ತಿಪಟೂರು.	ಕಂಬಿಗನಹಳ್ಳಿ.	ವೆಂಕಣ್ಣಾಚಾರು) ವ ಇತರ 3 ಜನರು	ಎ. ಸೆಂ. 335 58	ರೂ. ಆ. ಪೈ. 390 0 0	ರೂ. ಆ. ಪೈ. 262 0 0	ರೂ. ಆ. ಪೈ. 206 14 8	ಸ್ಯ 1887ನೇ ಇಸವಿ ಆಗಸ್ಟ್ ತಾರೀಖು 15ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರ ರೂಬರು.

ತಾರೀಖು 18ನೇ ಜೂ 1887.

ಕ್ಯಾಂಪ್ ನಂ. 878.—ಮೈಸೂರು ರೆವಿನ್ಯೂ ಸರ್ವೇ ಅಸಿಸ್ಟೆಂಟ್ ಸೂಪರ್ಟೆಂಡೆಂಟ್ ಮೆ|| ಹೆಚ್. ರಾಮಾನುಜಯ್ಯಂಗಾರ್ರಿಗೆ 1887ನೇ ಇಸವಿ ಜೂ 7ನೇ ಮಕ್ಕಂ ಕ್ಯಾಂಪ್ 751ನೇ ನಂಬರುಳ್ಳ ದಿವಾನರವರ ಇಸ್ತಿಹಾರಿನಲ್ಲಿ ಮಂಜೂರ್ ಮಾಡಲ್ಪಟ್ಟಿದ್ದ ರಜಾಕ್ಕೆ ಜಾಸ್ತೀಯಾಗಿ, 1887ನೇ ಇಸವಿ ಜೂ 13ರ ಲಾಗಾಯತು ಯರಡು ತಿಂಗಳೂ ಹದಿನೈದು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 23ನೇ ಜೂ 1887.

ಕ್ಯಾಂಪ್ ನಂ. 904.—ಮದ್ದಗಿರಿ ತಾಲ್ಲೂಕು ಅಮಲ್ದಾರ್ ವೇಲಾಯುಧಂ ಪಿಳ್ಳೈಯವರಿಗೆ, ಜೂ 16ರ ಲಾಗಾಯತು ಯಾ ಅವರು ರಜಾ ಉಪಯೋಗಿಸಿಕೊಳ್ಳುವ ತಾರೀಖು ಮೊದಲು 20 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟ್ಯು ಯಿರುತ್ತೆ.

ವೇಲಾಯುಧಂ ಪಿಳ್ಳೈಯವರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ವರಿಗೂ, ಪೊಲೀಸ್ ಇನ್ಸ್ಪೆಕ್ಟರ್ ನಾಗೇಶ್ವರಯ್ಯನವರು ಸದರೀ ತಾಲ್ಲೂಕಿನ ಬಾರ್ದಾರಿ ಅಮಲ್ದಾರ್ ಫಸಲಿ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಚಲಾಯಿಸಲಿಕ್ಕೆ ಅಪ್ಪಣೆ ಪಡೆದು ಯಿರುತ್ತಾರೆ.

ಕ್ಯಾಂಪ್ ನಂ. 908.—1884ನೇ ಇಸವಿ ಡಿಶಂಬರ್ 6ನೇ ಮುಕ್ತುಂ 5063—107ನೇ ನಂಬರ್‌ವುಳ್ಳ ದಿರ್ವಾರವರ ಪ್ರೊಸೀಡಿಂಗ್ಸ್‌ನ್ನ ನುಸರಿಸಿ, ಚನ್ನರಾಯಪಟ್ಟ್ಣ ತಾಲ್ಲೂಕು ಅಮಲ್ದಾರ್ ರಾವೂನುಜಯ್ಯಂಗಾರ್ರು ತಾವು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 6 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟ್ಯಿರುತ್ತಾರೆ.

ಕ್ಯಾಂಪ್ ನಂ. 910.—ತಿಪಟೂರು ತಾ|| ಅಮಲ್ದಾರ್ ರಾಮಸ್ವಾಮಯ್ಯನವರು, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 25 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟ್ಯಿರುತ್ತಾರೆ.

ರಾಮಸ್ವಾಮಯ್ಯನವರ ಗೈರ್ ಹಾಜರೀ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ ತುರವೇಕೆರೆ ಡಿಪ್ಯೂಟಿ ಅಮಲ್ದಾರ್ರು ತಿಪಟೂರು ತಾಲ್ಲೂಕು ಚಾರ್ಜ್ ವಹಿಶಿರತಕ್ಕದ್ದು.

ಕ್ಯಾಂಪ್ ನಂ. 912.—ಕೊರಟಗೆರೆ ತಾಲ್ಲೂಕು ಡಿಪ್ಯೂಟಿ ಅಮಲ್ದಾರ್ ಜಿ. ತಿರುನಾರಣಯ್ಯಂಗಾರು, 1887ನೇ ಇಸವಿ ಜೂ 25ರ ಲಾಗಾಯತು ಯಾ ಅವರು ರಜಾ ಉಪಯೋಗಿಸಿಕೊಳ್ಳುವ ತಾರೀಖು ಮೊದಲು 2 ತಿಂಗಳು 16 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟ್ಯಿರುತ್ತಾರೆ.

ತಿರುನಾರಣಯ್ಯಂಗಾರ್ರು ರಜಾದಮೇಲೆ ಯಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ, ತುಮಕೂರು ಡಿಪ್ಯೂಟಿ ಕಮ್ಮಿಷನರ್ ಆಫೀಸ್ ರೆವಿನ್ಯೂ ಹೆಡ್ ಮುನಷಿ ಶೀತಾರಾಮಯ್ಯನವರು, ಕೊರಟಗೆರೆ ಡಿಪ್ಯೂಟಿ ಅಮಲ್ದಾರ್ ವ ಥರ್ಡ್ ಕ್ಲಾಸ್ ಮಾಜಿಸ್ಟ್ರೇಟ್ ಕೆಲಸ ನೋಡುವಂತೆ ವೊಕರರ್ ಮಾಡಲ್ಪಟ್ಟ್ಯಿರುತ್ತಾರೆ.

ತಾರೀಖು 29ನೇ ಜೂ 1887.

ನಂ. 44.—ಬೆಂಗಳೂರು ಟವ್ನ್ ಮಾಜಿಸ್ಟ್ರೇಟ್ ಇ. ಸಿ. ಷಣ್ಮುಗವೇಲು ಪಿಳ್ಳೈಯವರಿಗೆ, 1884ನೇ ಇಸವಿ ಡಿಶಂಬರ್ 6ನೇ ಮುಕ್ತುಂ 5063—407ನೇ ನಂಬರುಳ್ಳ ದಿರ್ವಾರವರ ಪ್ರೊಸೀಡಿಂಗ್ಸ್ ಅನುಸರಿಸಿ, 1887ನೇ ಇಸವಿ ಜೂ 21ರ ಲಾಗಾಯತು ಹದಿನೈದು ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟ್ಯಿರುತ್ತೆ.

ನಂ. 45.—1887ನೇ ಇಸವಿ ಮೇ 30ನೇ ಮುಕ್ತುಮಿನ 619ನೇ ನಂಬರುಳ್ಳ ದಿರ್ವಾರವರ ಇಸ್ತಿಹಾರನ್ನನುಸರಿಸಿ, ಹೇಮಾ ಹನುಮಂತಯ್ಯನವರ ಗೈರ್ ಹಾಜರೀ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ, ತುಮಕೂರು ಡಿಸ್ಟ್ರಿಕ್ಟ್ ರೆವಿನ್ಯೂ ಹೆಡ್ ಅಕ್ಕೌಂಟೆಂಟ್ ಗೋಪಾಲಯ್ಯಂಗಾರ್ರು, ಗುಬ್ಬಿ ತಾ|| ಆಕ್ಟಿಂಗ್ ಅಮಲ್ದಾರ್ರಾಗಿ ವೊಕರರ್ ಮಾಡಲ್ಪಟ್ಟ್ಯಿರುವದಲ್ಲದೆ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳನ್ನೂ ಇವರ ದೆಸೆಯಿಂದ ಪಡೆದು ಯಿರುತ್ತಾರೆ.

ಹುಕ್ಕುಂ ಬಮೋಜೀಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರಟೇರಿ.